## ಕವಿತೆ




**ಎಚ್. ಪಟ್ಟಾಭಿರಾಮ ಸೋಮಯಾಜಿ**

ಕಲೆ: ಎಸ್.ವಿ. ಹೂಗಾರ್




# ಬಿಟ್ಟುಬಿಡು

ಕೂದಲ ತಲೆ ಹರಡಿ ಬಿಡು
ಕಾದಲ ಸುಮ ಬಾಣ ಬಿಡು
ಕಣ್ಣ ತುಂಬ ಕಾಡಿಗೆ
ಮೇಲೆ ತುಸುವೆ 'ಪೋಡಿಗೆ'
ನಗೆಯ ನಸುವೆ ಮೋಡಿಗೆ
ನೊಸಲ ನಿರಿಗೆ ತಿದ್ದಿ ಬಿಡು
ಹುಬ್ಬು ಗಂಟ ಸಡಿಲ ಬಿಡು
ಹೊಳ್ಳೆಗೊಂದು ನತ್ತು
ತುಟಿಯ ತುಂಬ ಮುತ್ತು
ಕೊಂಕು ಬಿಂಕ ಬೆಂಕಿ ಹತ್ತಿ
ಇಳಿದು ಕೆನ್ನೆ ಗುಳಿಯಲವಿತು
ಕನ್ನೆ ಸ್ನೇಹದಂತೆ
ಇದ್ದು ಬಿಡು
ಬಿದ್ದು ಬಿಡು
ಹಲ್ಲು ಕಚ್ಚಿ ನಕ್ಕು ಬಿಡು
ಮೋಡ ಪಕ್ಕ ಸರಿಸಿ ಬಿಡು
ಬೆಳಕು ತೂರಿ ಬರಲಿ ಬಿಡು
ರೆಕ್ಕೆಗಳಿಗೆ ಕನಸು
ಚಿಕ್ಕೆಗಳಿಗೆ ಹಕ್ಕೆ
ಕೊಕ್ಕುಗಳಿಗೆ ಉಣಿಸು
ಕೊಟ್ಟು ತಣಿದು ಗೆದ್ದು ಬಿಡು